# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 22 / 2022

ಸಿಡಬ್ಲ್ಯೂ- 4
ಪಿಡಬ್ಲ್ಯೂ- 4

ದಿನಾಂಕಃ **12.03.2026.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಗೋವಿಂದ ರಾಠೋಡ |
| ತಂದೆಯ/ಗಂಡನ ಹೆಸರುಃ | - | ಧರ್ಮಣ್ಣ |
| ವಯಸ್ಸುಃ | - | 40 ವರ್ಷ |
| ಉದ್ಯೋಗಃ | - | ಮಕ್ಕಳ ರಕ್ಷಣಾಧಿಕಾರಿ. |
| ವಾಸಸ್ಥಳಃ | - | ಜಿಲ್ಲಾ ಮಕ್ಕಳ ರಕ್ಷಣೆ ಘಟಕ ಯಾದಗಿರಿ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಕಳೆದ 2012 ರಿಂದ ಇಲ್ಲಿಯ ವರೇಗೆ ಮಕ್ಕಳ ರಕ್ಷಣಾಧಿಕಾರಿಯಾಗಿ ಜಿಲ್ಲಾ ಮಕಕಳ ರಕ್ಷಣೆ ಘಟಕ ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 19.07.2020 ರಂದು ಮಕ್ಕಳ ಸಹಾಯವಾಣಿ 1098 ನೇದ್ದಕ್ಕೆ ಒಂದು ದೂರು ಬಂದಿತ್ತು. ಆರ್ ಹೊಸಳ್ಳಿ ಗ್ರಾಮದ ಬಾಲಕಿ ಕುಮಾರಿ ಬಸಲಿಂಗಮ್ಮ ತಂದೆ ಕಾಶಪ್ಪ ಇವರನ್ನು ಬಳಿಚಕ್ರ ಗ್ರಾಮದ ವರನಾದ ಸಾಬಣ್ಣ ತಂದೆ ನಾಗಪ್ಪ ಕೋಟೆ ರವರೊಂದಿಗೆ ಬಾಲ್ಯ ವಿವಾಹ ಮಾಡಿದರು ಎಂದು ದೂರು ಬಂದಿತ್ತು ಸದರಿ ದೂರಿನ ಆಧಾರದ ಮೇರೆಗೆ ದಿನಾಂಕಃ 21.07.2020 ರಂದು ನಾನು ಹಾಗೂ ಶರಣಪ್ಪ ಕಲಾಲ ಮಕ್ಕಳ ಸಹಾಯವಾಣಿ ಸಿಬ್ಬಂದಿ ರವರು ಕೂಡಿ ಬಳಿಚಕ್ರ ಗ್ರಾಮಕ್ಕೆ ಹೋದೇವು ಅಲ್ಲಿ ಚಾಸಾ-6 ರವರನ್ನು ಕರೆದುಕೊಂಡು ಸಾಬಣ್ಣ ತಂದೆ ನಾಗಪ್ಪ ಕೋಟೆ ರವರ ಮನೆಗೆ ಹೋಗಿ ಅಲ್ಲಿ ಆರ್ ಹೊಸಳ್ಳಿ ಗ್ರಾಮದ ಬಾಲಕಿಯೊಂದಿಗೆ ನಿನ್ನ ಮದುವೆ ಆಗಿದ್ದೀಯ ಎನ್ನುವ ಬಗ್ಗೆ ವಿಚಾರಿಸಿದ್ದಾಗ  ಆತನು ಹೌದು ಮದುವೆಯಾಗಿದ್ದು ಎಂದು ನಮ್ಮಗೆ ಹೇಳಿದರು ಆವಾಗ ಬಾಲಕಿ ಹೊಲಕ್ಕೆ ಹೋಗಿದ್ದಳು ಅಲ್ಲಿಂದ ಆತನ ಮನೆಗೆ ಕರೆದುಕೊಂಡು ಬಂದಿದ್ದರು.ನಂತರ ಸದರಿ ಬಾಲಕಿಯನ್ನು ನಮ್ಮ ವಶಕ್ಕೆ ಪಡೆದು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಿದ್ದೇವು. ನಂತರ ಸದರಿ ಬಾಲಕಿಯನ್ನು ದಿನಾಂಕಃ 04.10.2020 ರ ವರೇಗೆ ಜಿಲ್ಲಾ ಮಕ್ಕಳ ಸಮಿತಿಯವರು ವಿಚಾರಣೆ ಮಾಡಿದರು. ನಂತರ ಸದರಿ ಬಾಲಕಿಯನ್ನು ಆಪ್ತಸಮಲೋಚನೆಗೆ ಒಳಪಡಿಸಿದ್ದಾಗ ಸದರಿ ಬಾಲಕಿಯು ದಿನಾಂಕಃ 13.05.2020 ಕ್ಕೆ ನನ್ನ ಬಾಲ್ಯ ವಿವಾಹವು  ಮಾಡಿರುತ್ತಾರೆ ಎಂದು ಹೇಳಿಕೆಯನ್ನು ನೀಡಿದ್ದಳು. ಆವಾಗ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಚಾಸಾ-7 ರಿಂದ 10 ರವರು ಸೇರಿ ಒಂದು ಆದೇಶವನ್ನು ಜಾರಿ ಮಾಡಿದರು.ದಿನಾಂಕಃ 13.05.2020 ರಂದು

ಬಾಲಕಿಯ ಬಾಲ್ಯ ವಿವಾಹ ಆಗಿದೆ ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಲು ತಿಳಿಸಿದರು ಆವಾಗ ನಾವು ಆರೋಪಿತರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದೇವು. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ.ಆರ್.ಕೆ. ರವರಿಂದಃ

ದಿನಾಂಕಃ 21.07.2020 ಮದ್ಯಾಹ್ಞ 12 ಕ್ಕೆ ವರನ ಮನೆಗೆ ಹೋಗಿದ್ದೇವು. ಮಾಹಿತಿ ಬಂದ ತಕ್ಷಣ ಘಟನ ಸ್ಥಳಕ್ಕೆ ಹೋಗುತ್ತೇವೆ. ಎರಡು ದಿನಗಳ ತಡವಾಗಿ ಮಾಹಿತಿ ಬಂದ ಸ್ಥಳಕ್ಕೆ ಹೋಗಿದರ ಬಗ್ಗೆ ತಡಕಾರಣವನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಮೇಲಾಧಿಕಾರಿಗಳು ಹೋಗು ಎಂದು ಹೇಳಿದ್ದಾಗ ನಾನು ಹೋಡಿದ್ದೆ ಎಂದು ಹೇಳುತ್ತಾರೆ. ದಿನಾಂಕಃ 21.07.2020 ರಂದು ನನ್ನ ಮೇಲಾಧಿಕಾರಿಗಳು ಮೌಖಿಕವಾಗಿ ಆದೇಶ ನೀಡಿದರು. ಸದರಿ ಮನೆಯಲ್ಲಿ 3 ನೇ ಆರೋಪಿತನು ಇದ್ದನ್ನು ಆತನನ್ನು ನಾವು ವಿಚಾರಿಸಿದ್ದಾಗ 1 ನೇ ಆರೋಪಿತನು ಕುರಿಕಾಯಲು ಹೋಗಿರುತ್ತಾನೆ ಎಂದು ನಮ್ಮಗೆ ತಿಳಿಸಿದರು. ನಾವು ಹೋದಾಗ ಮನೆಯಲ್ಲಿ ಬಾಲಕಿ ಇರಲಿಲ್ಲ ಆದರೆ ಅವಳು ಜಮೀನಿನಲ್ಲಿ ಕಳೆತೆಗೆಯಲು ಹೋಗಿರುತ್ತಾಳೆ ಎಂದು 3 ನೇ ಆರೋಪಿತನು ನಮ್ಮಗೆ ಹೇಳಿದನ್ನು ಆವಾಗ ನಾವು ಅವರನ್ನು ಕರೆದುಕೊಂಡು ಬನ್ನಿ ಎಂದು ನಾವು ಹೇಳಿದ್ದೇವು ಎಂದು ಹೇಳುತ್ತಾರೆ. ನಂತರ ಸದರಿ ಬಾಲಕಿಯನ್ನು 3 ನೇ ಆರೋಪಿತನು ಮನೆಗೆ ಕರೆದಕೊಂಡು ಬಂದಿದ್ದನ್ನು. 3 ನೇ ಆರೋಪಿತನ ಅನುಮಾತಿಯನ್ನು ಪಡೆದು ಬಾಲಕಿಯನ್ನು ನಮ್ಮ ವಶಕ್ಕೆ ಪಡೆದಿದ್ದೇವು. 3 ನೇ ಆರೋಪಿತನು ನಮ್ಮಗೆ ಮೌಖಿಕವಾಗಿ ಒಪ್ಪಿಗೆ ನೀಡಿದನು. ನಿಮ್ಮ ಹೇಳಿಕೆಯಲ್ಲಿ 3 ನೇ ಆರೋಪಿತನು ಮೌಖಿಕವಾಗಿ ಬಾಲಕಿಯನ್ನು ವಶಕ್ಕೆ ಪಡೆದುಕೊಳ್ಳಿ ಎಂದು ಅನುಮತಿಯನ್ನು ನೀಡಿದನು ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿಯು 3 ನೇ ಆರೋಪಿತನು ಮೌಖಿಕವಾಗಿ ಅನುಮತಿಯನ್ನು ನೀಡಿದನು ಎಂದು ಹೇಳುತ್ತಾರೆ. ದಿನಾಂಕಃ 21.07.2020 ರಂದು 1 ನೇ ಆರೋಪಿತನ ಊರಿಗೆ ನಾವು ಹೋಗಿದ್ದೇವು ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 21.07.2020 ರಂದು 3 ನೇ ಆರೋಪಿತನ ಮೌಖಿಕ ಆದೇಶದ ಮೇರೆಗೆ ಬಾಲಕಿಯನ್ನು ನಮ್ಮ ವಶಕ್ಕೆ ಪಡೆದುಕೊಂಡಿದ್ದೇವು ಎಂದು ನಾನು ಸುಳ್ಳು ಸಾಕ್ಯೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 04.10.2020 ರಂದು ಬಾಲಕಿಯನ್ನು ಆಪ್ತಸಮಲೋಚನೆಯನ್ನು ಮಾಡಿದ್ದಾಗ ಬಾಲ್ಯ ವಿವಾಹ ಆಗಿರುವ ಬಗ್ಗೆ ಹೇಳಿದ್ದಳು ಎಂದು ಅಂತಿಮ ವರದಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.ನಾವು ಬಳಿಚಕ್ರ ಗ್ರಾಮಕ್ಕೆ ಹೋಗಿದ ಮರುದಿವಾಸ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದರು. ದಿನಾಂಕಃ13.05.2020 ರಂದು ಬಾಲಕಿ ಬಸಲಿಂಗಮ್ಮಳ ಮದುವೆಯು 1 ನೇ ಆರೋಪಿತನೊಂದಿಗೆ ಬಾಲ್ಯ ವಿವಾಹ ಆಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಅನಾಕ್ಷರಸ್ಥರು ಹಾಗೂ ಮುಗ್ದರು ಇರುತ್ತಾರೆ ಎಂದರೆ ಸರಿ. ಆರೋಪಿತರ ವಿರೋದಿಗಳು ಸುಳ್ಳು

ಮಾಹಿತಿಯನ್ನು ನೀಡಿದರ ಮೇರೆಗೆ ನಮ್ಮ ಇಲಾಖೆಯವರು ಸುಳ್ಳು ದೂರನ್ನು ನೀಡಿದರು ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. 1 ರಿಂದ 4 ನೇ ಆರೋಪಿತರು ಬಾಲ್ಯ ವಿವಾಹದಲ್ಲಿ ಯಾವುದೇ ಪಾತ್ರ ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 13.05.2020 ರಂದು ಯಾವುದೇ ಬಾಲ್ಯ ವಿವಾಹ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾವು ಸುಳ್ಳು ಮಾಹಿತಿಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-5 ಮತ್ತು 6 ರವರು ಕೂಡಿ 1 ನೇ ಆರೋಪಿತನ ಗ್ರಾಮದ ಬಳಿಚಕ್ರಕ್ಕೆ ಹೋಗಿದ್ದೇವು ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.